"ತಮ್ಮ ಹೆಸರು."

"ಎಸರು ಒಲೆ ಮ್ಯಾಲೆ, ಹಿಟ್ಟೆಸರು ಕೋಡೊಲೆ ಮ್ಯಾಲೆ."

"(ಕಕ್ಕಾಬಿಕ್ಕಿ) ನೀವ್ ತುಂಬಾ ಹಾಸ್ಯ ಮಾಡ್ತೀರಾ, ನಿಮ್ಮ ನಿಜವಾದ ಹೆಸರು ಹೇಳಿ."

"ರಂಗಮ್ಮ ಅಂತ ಬರ್ಕಳಿ."

ಅಷ್ಟೊತ್ತಿಗಾಗಲೇ ಈ ದೃಶ್ಯವನ್ನು ನೋಡಲು ಅಕ್ಕ ಪಕ್ಕದ ಮನೆಯವರು ಸೇರಿಬಿಟ್ಟಿದ್ದರು, ಅದರಲ್ಲೊಬ್ಬರು,

"ಸುಳ್ಳು ಹೇಳ್ತೈತೆ ಸಾ, ಅವಳ ಹೆಸರು ಬೆಲ್ಲಂಪುಲ್ಲಕ್ಕ."

"(ಮತ್ತೂ ಕಕ್ಕಾಬಿಕ್ಕಿ) ಯಾವುದಾದರೂ ಒಂದು ಹೆಸರು ಹೇಳೀಮ್ಮ."

ಹೇಳಿದರು, ಅಂತೂ ಆ ಹೆಸರಿನ ಎಪಿಸೋಡು ಮುಗಿಯಿತು. ಈಗ ಊರಿನ ಕೃಷಿ ಮಾಹಿತಿ ಸಂಗ್ರಹ ಶುರು.

"ನಿಮ್ಮೂರಲ್ಲಿ ಸರಾಸರಿ ಎಷ್ಟು ಎಕರೆ ಜಮೀನಿದೆ."

ಮಕ ಮಕ ನೋಡಿತು ಬೆಲ್ಲಂಪುಲ್ಲಕ್ಕ.

"ಅಂದ್ರೆ ನಿಮ್ಮೂರಲ್ಲಿ ಒಬ್ಬೊಬ್ಬರಿಗೆ ಎಷ್ಟು ಎಕರೆ ಜಮೀನಿದೆ."

"ಇರೋರಿಗೆ ಐತೆ, ಇಲ್ದೋರಿಗೆ ಇಲ್ಲ ಬುಡ್ರಿ ಸಾ."

"ಹಂಗಲ್ಲಮ್ಮ, ಕಡಿಮೆ ಅಂದ್ರೆ ಎಷ್ಟಿದೆ, ಜಾಸ್ತಿ ಅಂದ್ರೆ ಎಷ್ಟಿದೆ."

